SRI M. ABDUL LATHEEF.—Sir, the loss that the Forest Department is incurring runs crores of rupees. The present rate of wood is round about Rs. 300/- whereas we have been supplying wood to this factory at the rate of Rs. 44/-. The factory is now well established and already ten years have passed. It is also admitted that only about 400 people are employeed in the Factory. In view of all these, will the Government think to revise this agreement and raise the price of the wood and get the market rates?

SRI R. GUNDU RAO —I have already stated that in several cases, the Government has to revise the previous Government's agreements with the industries. Definitely, we are going to rewiew the whole thing.

Disturbances at Mysore Krishna Rajendra Mills

283 SRI PAMPAPATHI (Davanagere).—Will the Chief Minister be pleased to state:—

(a) whether it has come to the notice of the Government that recently at the compound of Mysore Krishnarajendra Mills ther was an attack on the workers of the AITUC and that they have sustained serious injuries ;

(b) whether it has come to the notice of the Government that even after lodging a complaint at the Police Station by the workers, the Sub-Inspecter of Police has failed to make suitable enquiry into the matter ;

(c) if so, what action the Government has taken in the matter?

SRI R. GUNDU RAO (Chief Minister).—

(a) Yes.

(b) No.

(c) This question does not arise in view of the reply to clause 'a'

ಶ್ರೀ ಪಂಪಾಪತಿ.— ಸ್ವಾಮಿ ತಮ್ಮ ಉತ್ತರದಲ್ಲಿ ''ಆ'' ಪ್ರಶ್ನೆಗೆ ''ಬಂದಿದೆ'' ಎಂದು ಹೇಳಿದ್ದೀರಿ? ಆದರೆ ಸದರಿ ಪೋಲೀಸ್ ಸ್ಟೇಷನ್‌ಗೆ ದೂರು ಕೊಟ್ಟರೂ ಅಲ್ಲಿನ ಸಬ್ ಇನ್ಸ್‌ಪೆಕ್ಟರ್ ''ಯಾವ ಕಾರ್ಯಕ್ರಮವೂ ತೆಗೆದುಕೊಂಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ'' ಎನ್ನುವುದಕ್ಕೆ ಬಂದಿದೆ ಎಂದು ಒಪ್ಪಿಕೊಂಡಿದ್ದೀರಿ? ಆದರೆ ಏನೂ ಕ್ರಮ ತೆಗೆದುಕೊಂಡಿಲ್ಲ. ತೆಗೆದುಕೊಂಡಿದ್ದಾರೆ ಎನ್ನುವುದು ಸರಿಯಲ್ಲ, ಅಲ್ಲಿ ಯಾವ ರೀತಿ ವಿಚಾರಣೆಯನ್ನೂ ಮಾಡಲಿಲ್ಲ. ಆದ್ದರಿಂದ ಈಗಲಾದರೂ ಏನೂ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಆ ಅಧಿಕಾರಿಯ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಆರ್. ಗುಂಡೂರಾವ್.— ಯಾವಾಗಲೂ ದೂರು ಪೋಲೀಸ್ ಸ್ಟೇಷನ್‌ಗೆ ಬಂದ ಮೇಲೆ ಕೇಸ್ ದಾಖಲು ಮಾಡಿಕೊಳ್ಳುವುದು ಪದ್ಧತಿ. ಅದನ್ನು ದಾಖಲು ಮಾಡಿಕೊಂಡಿದ್ದಾರೆಂದು ಹೇಳಿದ್ದೇನೆ.

ಶ್ರೀ ಪಂಪಾಪತಿ.—ಕೃಷ್ಣರಾಜ ಮಿಲ್‌ನಲ್ಲಿ ಕೆಲವು ಗೂಂಡಾಗಳನ್ನು ಇಟ್ಟುಕೊಂಡು, ಮಾಲೀಕರು ಮತ್ತು ಕೆಲವು ನೌಕರರು ಸೇರಿಕೊಂಡು ಕಿರುಕುಳ ಕೊಡುತ್ತಿದ್ದರೂ ಪೋಲೀಸ್‌ನವರು ಏನೂ ಕ್ರಮ ತೆಗೆದುಕೊಂಡಿಲ್ಲ ಅಲ್ಲಿ ನೂರಾರು ಜನರು ಕೆಲಸಕ್ಕೆ ಹೋಗುವುದಕ್ಕೆ ಆಗುತ್ತಿಲ್ಲ ಮತ್ತೆ ಮಾಲೀಕರು ಇವರನ್ನು ಹೊರಗಡೆ ನಿಲ್ಲಿಸಿದ್ದಾರೆ ಇದರ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.— ನಿಜ, ನಾನು ಹೇಳುವುದು ಏನು ಎಂದರೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೇ ಎಂದು ಕೇಳಿದ್ದಕ್ಕೆ ತೆಗೆದುಕೊಂಡಿದ್ದಾರೆ. ಇನ್ನು ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದೇನೆ.

ಶ್ರೀ ಪಂಪಾಪತಿ — ಸ್ವಾಮಿ ನಾನು ಹೇಳುತ್ತೇನೆ ಇಲ್ಲಿಯವರೆಗೆ ಅಲ್ಲಿನ ಪೋಲೀಸ್ ಅಧಿಕಾರಿ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ ಮತ್ತು ಅಲ್ಲಿನ ಕೆಲಸಗಾರರಿಗೆ ರಕ್ಷಣೆ ಕೊಟ್ಟಿಲ್ಲ ಈಗಲಾದರೂ ಅಲ್ಲಿನ ಕೆಲಸಗಾರರಿಗೆ ರಕ್ಷಣೆ ಕೊಡುತ್ತೀರಾ ಸ್ವಾಮಿ ?

ಶ್ರೀ ಆರ್. ಗುಂಡೂರಾವ್.— ಯಾರೇ ಪೋಲೀಸ್ ಸ್ಟೇಷನ್‌ಗೆ ದೂರು ಕೊಟ್ಟರೂ ಕೇಸ್ ರಿಜಿಸ್ಟರ್ ಮಾಡಿಕೊಂಡು ಅವರಿಗೆ ಕಾನೂನು ಪ್ರಕಾರ ಏನು ರಕ್ಷಣೆ ಕೊಡಬೇಕೋ ಅದನ್ನು ಕೊಟ್ಟೇ ಕೊಡುತ್ತಾರೆ.

ಶ್ರೀ ಪಂಪಾಪತಿ.— ಅಲ್ಲಿ ನೂರಾರು ಜನ ಕೆಲಸಗಾರರು ಹೊರಗಡೆ ಇದ್ದಾರೆ ಮತ್ತೆ ಗೂಂಡಾಗಳಿಂದ ಹೊಡೆಸುತ್ತಿದ್ದಾರೆ ಆದ್ದರಿಂದ ಈಗಲಾದರೂ ಅವರಿಗೆ ರಕ್ಷಣೆ ಕೊಡಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್.— ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಂಡಿದ್ದಾರೆ.

ಶ್ರೀ ಎಚ್. ಗಂಗಾಧರನ್.— ಅಲ್ಲಿ ಏನಾಗಿದೆ ಎಂದರೆ ಎರಡು ಯೂನಿಯನ್‌ಗಳು ಹುಟ್ಟಿಕೊಂಡು ಹೊಡೆದಾಟ ನಡೆಯುತ್ತಿದೆ. ಅಲ್ಲಿ ಎಷ್ಟೋ ಸಾರಿ ಖೂನಿಗಳು ಆಗಿವೆ. ಆದ್ದರಿಂದ ಅಲ್ಲಿನ ಜನ ಬಹಳ ಹೆದರಿದ್ದಾರೆ. ಅಲ್ಲಿಗೆ ಒಂದು ಸ್ಪೆಷಲ್ ಪೋಲೀಸ್ ಸ್ಟೇಷನ್ ಕೊಟ್ಟು ಆ ಕಾರ್ಮಿಕರಿಗೆ ರಕ್ಷಣೆ ಕೊಡುತ್ತೀರಾ? ಅಲ್ಲಿ ಗೂಂಡಾಗಳು ಮತ್ತು ಪಾರ್ಟಿ ಇರುವ ಕಾರಣಕ್ಕೋಸ್ಕರ ತಾವು ಏನಾದರೂ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಆರ್. ಗುಂಡೂರಾವ್.— ಗಲಾಟೆ ಆದ ಕಡೆಗಳಿಗೆಲ್ಲಾ ಪೋಲೀಸ್ ಸ್ಟೇಷನ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಕಂಪ್ಲೈಂಟ್ ಬಂದ ಕಡೆ ಪೋಲೀಸರು ಕೇಸ್ ಹಾಕುತ್ತಾರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

Mosquito menace at Mysore City

310 SRI H. GANGADHARAN (Krishnaraja).— Will the Minister for Housing and Urban Development be pleased to state :—

(a) whether it is a fact that the Government has failed to control the increasing mosquito menace at Jayanagar, Fort Mohalla, Tonachi Koppal, Vidhyaranyapuram Saraswathipuram, etc., at Mysore City ;

(b) whether it is a fact that diseases are increasing due to mosquitos in the above said areas ;

(c) if so, whether any permanent measure solution found out for eradication of the mosquito menace ?